ಶ್ರೀ ಎ. ಜಿ. ಕೊಡಗಿ.—ಶ್ರೀಮಾನ್ ನಾನಯ್ಯನವರು ನಿನ್ನೆ ರಾತ್ರಿ ವಿಷಯ ಹೇಳುತ್ತಿದ್ದಾರೆ. ಆದರೆ ನಾನು ಇವತ್ತು ಬೆಳ್ಳಿಗ್ಗೆ ೧೧ ಘಂಟೆಯಲ್ಲಿ ಕೆ. ಎಸ್. ಆರ್, ಟಿ. ಸಿ ಯ ಬಸ್ ನಿಲ್ದಾಣಕ್ಕೆ ದೂರವಾಣಿ ಮಾಡಿ ನಮಗೆ ಎರಡು ಸೀಟುಗಳನ್ನು ಮಂಗಳೂರಿಗೆ ಬುಕ್ ಮಾಡಿ ಎಂಬುದಾಗಿ ಕೇಳಿದಾಗ, ಅದಕ್ಕವರು, ಇವತ್ತು ಮಂಗಳೂರಿಗೆ ಇಲ್ಲಿಂದ ಯಾವುದೇ ಬಸ್ಸುಗಳು ಹೋಗುತ್ತಿಲ್ಲ. ಆದ್ದರಿಂದ ಸೀಟುಗಳನ್ನು ಬುಕ್ ಮಾಡುವುದಿಲ್ಲ.. ನಾಳೆಗೂ ನಾವು ಬುಕ್ ಮಾಡುವ ಸ್ಥಿತಿಯಲ್ಲಿಲ್ಲ ಎಂಬುದಾಗಿ ಹೇಳಿದ್ದಾರೆ. ಅದಕ್ಕೆ ನಾನು ಖಾಸಗಿ ಬಸ್ಸುಗಳು ಬೇರೆ ಮಾರ್ಗವಾಗಿ ಹೋಗುತ್ತಿವೆಯಲ್ಲಾ; ಎಂಬುದಾಗಿ ಕೇಳಿದಕ್ಕೆ ಅದು ಇರಬಹುದು. ಆದರೆ ನಮ್ಮ ಬಸ್ಸುಗಳನ್ನು ಬೇರೆ ಮಾರ್ಗವಾಗಿ ಓಡಿಸುವುದಕೆ ಮೇಲಿನ ಅಧಿಕಾರಿಗಳಿಂದ ಸೂಚನೆ ಬಂದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಹಾಸನ ಮಾರ್ಗವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಇವತ್ತೂ ಹೋಗುವುದಿಲ್ಲ, ನಾಳೆ ವಿಚಾರ ಇವತ್ತು ಹೇಳುವ ಸ್ಥಿತಿಯಲ್ಲಿಲ್ಲ, ಬುಕ್ ಮಾಡುವ ಸ್ಥಿತಿಯಲ್ಲಿಲ್ಲ ಅಂತ ಹೇಳಿದರು, ಈ ನೆರೆ ಹಾವಳಿಯಿಂದ ೩೦೦ ಜನ ಪ್ರಯಾಣಿಕರು ಆ ಘಾಟಿನಲ್ಲಿ ಉಳಿಯುವಂತಹ ಪ್ರಸಂಗ,... ಬಹುಶ: ಕಾಸಕನಾಗಿ ಅಲ್ಲಿ ಇಲ್ಲದಿದ್ದರೆ ಅಲ್ಲಿದ್ದಂತಹ ಅಷ್ಟು ಪ್ರಯಾಣಿಕರೂ ಇನ್ನೂ ಯಾವ ತೊಂದರೆ ಪಡೆಬೇಕಾಗಿತ್ತೋ ಗೊತ್ತಿಲ್ಲ. ಅದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಆದ್ದರಿಂದ ಈಗ ಮಂತ್ರಿಗಳು ರಸ್ತೆಸಾರಿಗೆ ಬಸ್ಸುಗಳನ್ನು ಬೇರೆ ಮಾರ್ಗವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಕಳುಹಿಸುವಂತಹ ವ್ಯವಸ್ಥೆಯನ್ನು ದಯಮಾಡಿ ಮೊದಲು ಮಾಡಬೇಕು.

೨-೩೦ ಮಧ್ಯಾಹ್ನ

ಶ್ರೀ ಕೆ. ರಾಮ್‌ಭಟ್—ಅಧ್ಯಕ್ಷರೆ, ಈ ದಿನ ನಾನು ಊರಿಗೆ ಹೋಗಬೇಕಾಗಿತ್ತು, ಮಂಗಳೂರು-ಬೆಂಗಳೂರು ಬಸ್‌ಗಳು ಇಲ್ಲಾ ಎಂದು ಹೇಳುತ್ತಾರೆ. ಆದ್ದರಿಂದ ಮೈಸೂರು ಕಡೆಯಿಂದ ಊರಿಗೆ ಹೋಗಬೇಕಾಗಿದೆ.

ಶ್ರೀ ಕೆ. ಯಂಕಟಪ್ಪ.—ಮಾನ್ಯ ಸದಸ್ಯರಾದ ಶ್ರೀ ನಾನಯ್ಯ ಅವರು ಹಾಗೂ ಶ್ರೀ ಕೊಡಗಿ ಯವರು, ಹಾಗೂ ಶ್ರೀ ರಾಮ್‌ಭಟ್ ಅವರು ಬಸ್‌ಗಳು ಓಡಿಸಲಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಸರ್ಕಾರಕ್ಕೆ ಬಂದಿರುವ ಮಾಹಿತಿಯ ಪ್ರಕಾರ ನಿನ್ನೆ ರಾತ್ರಿ ೧೨ ಗಂಟೆಯಿಂದಲೇ ಆ ರೂಟಿನಲ್ಲಿ ಬಸ್‌ಗಳು ಓಡುತ್ತಿವೆ. ಎಲ್ಲಾ ಬಸ್‌ಗಳು ಓಡುತ್ತಿದ್ದರೂ ಮಾನ್ಯ ಸದಸ್ಯರು ಬಸ್‌ಗಳು ಹೋಗುತ್ತಿಲ್ಲವೆಂದು ಸಂಸ್ಥೆಯವರು ತಿಳಿಸಿದರೆಂದು ಹೇಳುತ್ತಿದ್ದಾರೆ. ಹಾಗೊಂದು ಪಕ್ಷ ಅವುಗಳು ಹೋಗದಿದ್ದ ಪಕ್ಷದಲ್ಲಿ ಆ ಬಗ್ಗೆ ತಕ್ಷಣದ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ ಅದು ಬರಲಿಲ್ಲ.

ಅಧ್ಯಕ್ಷರು. —ಅದನ್ನು ಕಳುಹಿಸಲಾಗಿದೆ.

Statement by the Minister for Education

re-abolition of 1st year P.U.C. Public Examination

SRI G. B. SHANKAR RAO.—Sir, some of the Hon. Members have pointed out that there has been hardship to the students due to the recent order of the Goverment abolishing Ist Year P.U.C. Public Examination. I will read a statement clarifying the position. It reads :

The I Year Pre-University Public Examination was abolished in the year 1979 by Government Order No. ED 29 TPU 79 dated 12th November 1979. In its place, Government issued in an annexure to

the Government Order, a set of rules for the conduct of class examination. The performance of the condidates during the I Year has to be evaluated by means of a test, a mid-term examination and an annual examination to be conducted by the colleges themselves.

The following statistics reveal the percentage of passes in the I year Pre-University examination when there was a public examination during the year 1978-79 and 1979-80 when the class examination were held.

During the 1978-79 public examination *i.e.*, April 1979-

(a) 30% of the candidates passed in all the subjects and were promoted to the II year Pre-University classes.

(b) 49% of the candidates passed in two or more subjects and failed in one or more subjects upto four subjects, but still went to the II year Pre- University class. These candidates had to pass the remaining subjects during the subsequent October or the April examination. However, they were allowed to keep term in the second year.

(c) 21% of the candidates failed compeletely and were never allowed to go to the II year Pre-University classes.

During the 1979-80 when the I year Pre-University class examinations were held by the colleges themselves, the following are the results.

(a) 91% of the candidates completely passed the I year Pre-University classes and gained entry to the II year Pre-University classes. These candidates need not have to appear for any subjects of the I year Pre-University class again, and

(b) Only 9% of the candidates failed in the I year Pre-University classes and did not get eligibility to go to the II year Pre-University classes.

From the above, it can be seen that no hardship is caused to the students of the I year Pre-University classes after the abolition of the I year Pre-University public examination.

Government is now contemplating addition to the rules governing the declaration of passes from the I year to the II year of the Pre-University class and is issuing orders shortly.

Sir, from the statement above it could be seen that during 1978-79 Public Examination only 30% of the candidates passed in all the subjects and gained entry to Second Year P.U.C. Now, after abolition of Ist year Public Examination 91% of the candidates have

completely passed the I year subjects and were promoted to the II Year P.U.C. That means there is no hardship caused to the students in view of abolition of I Year Public Examination.

ಶ್ರೀ ಕೆ. ರಾಮಭಟ್. – ಸಂಖ್ಯಾದೃಷ್ಟಿಯಿಂದ ತಾವು ಮೊದಲ ಪಿ.ಯು.ಸಿ.ಯಲ್ಲಿ ಕೇವಲ ಶೇಕಡ ೯ ಫೇಲ್ ಆಗಿದೆಯೆಂದು ಹೇಳುತ್ತಿದ್ದೀರಿ. ಆದರೆ ಮೊದಲು ಇದ್ದ ಸೌಕರ್ಯದಲ್ಲಿ ಮೊದಲ ವರ್ಷ ೨ ವಿಷಯಗಳಲ್ಲಿ ಉತ್ತೀರ್ಣನಾದರೆ ಆತ ೨ನೇ ವರ್ಷಕ್ಕೆ ಹೋಗಬಹುದಿತ್ತು. ಇದನ್ನು ವರ್ಷದ ಮಧ್ಯದಲ್ಲಿ ತೆಗೆದುಹಾಕಿದರೆ ಹೇಗೆ? ಕಾಲೇಜಿನ ಪರಿಸ್ಥಿತಿಗಳು ಇರುವುದರಿಂದ ಆದೇ ಸೌಕರ್ಯವನ್ನು ಮುಂದುವರಿಸ ಬಾರದೆಂದು ನನ್ನ ಪ್ರಶ್ನೆ. ತಾವು ತಮ್ಮ ಉತ್ತರದಲ್ಲಿ ಸರ್ಕಾರ ಈ ಬಗ್ಗೆ ತ್ವರಿತವಾಗಿ ಒಂದು ಆರ್ಡರನ್ನು ಹೊರಡಿಸಲಿದೆಯೆಂದು ಹೇಳಿದ್ದೀರಿ. ಆ ಆರ್ಡರ್ ವಿಷಯ ಏನೆಂದು ತಾವು ಈಗ ಹೇಳಬಹುದಲ್ಲ ಇದು ಒಂದು ವರ್ಷದ ಪ್ರಶ್ನೆ ಅಲ್ಲ. ಈಗಾಗಲೇ ಬಹಳ ತಡವಾಗಿದೆ. ಅನೇಕ ಸಮಸ್ಯೆಗಳಿಗೆ ನಾವು ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಕೇವಲ ೧೦ ಮಕ್ಕಳ ಒಂದು ವಿಷಯಕ್ಕಾಗಿ ಇದನ್ನು ತೆಗೆದು ಹಾಕವುದು ಸರಿಯಲ್ಲ. ಆದ್ದರಿಂದ ಆದಷ್ಟು ಬೇಗ ಎರಡು ದಿವಸಗಳಲ್ಲಿ ಹಿಂದೆ ಇದ್ದ ಮೊದಲ ವರ್ಷ ೨ ವಿಷಯ ಉತ್ತೀರ್ಣ ಹೊಂದಿದರೆ ಮುಂದಿನ ವರ್ಷಕ್ಕೆ ಹೋಗುವಂತಹ ಸೌಕರ್ಯವನ್ನು ವಿದ್ಯಾರ್ಥಿ ಗಳಿಗೆ ಒದಗಿಸಿ ಕೊಡಬೇಕೆಂದು ಸರ್ಕಾರಕ್ಕೆ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

SRI G. B. SHANKAR RAO.—During 1978-79 Public examination 21% of the candidates have been detained in I Year P.U.C. Now, after the introduction of new schemes only 9% of the candidates have been detained. So definitely there is some improvement.

ಶ್ರೀ ಎಸ್. ಪ್ರಮಿಳ— ತಪ್ಪು ಇಲಾಖೆಯಿಂದ ಒಂದು ನೋಟಿಫಿಕೇಷನ್ ಹೊರಡಿಸಲಾಗಿದೆ. ಅದರ ಬಗ್ಗೆ ನಾನು ಪ್ರಶ್ನೆಯನ್ನು ಕಳುಹಿಸಿದ್ದೆ. ಅದರಲ್ಲಿ ಮೊದಲ ವರ್ಷದ ಪಿ.ಯು. ಸಿ. ಪರೀಕ್ಷೆಗೆ ಹೋಗದವರು ೨ನೇ ವರ್ಷದ ಪಿ. ಯು. ಸಿ. ಗೆ. ಹೋಗಬಹುದು. ಆದರೆ ಮೊದಲ ವರ್ಷದ ಪರೀಕ್ಷೆ ಯಲ್ಲಿ ಅನುತ್ತೀರ್ಣರಾದವರು ೨ನೇ ವರ್ಷದ ಪಿ.ಯು.ಸಿ.ಗೆ ಹೋಗುವಂತಿಲ್ಲ. ಇದು ನ್ಯಾಯವೆ? ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಜಿ. ಬಿ. ಶಂಕರ್‌ರಾವ್.—ನೋಟಿಫಿಕೇಷನ್ ತಪ್ಪಾಗಿದೆಯೆಂದು ಅವರು ಹೇಳುತ್ತಿದ್ದಾರೆ. ಒರಿಜಿನಲ್ ನೋಟಿಫಿಕೇಷನ್‌ನ್ನು ನೋಡುತ್ತೇನೆ. ಅದರಲ್ಲಿ ಏನಾದರೂ ದೋಷ ಕಂಡುಬಂದರೆ ಅದನ್ನು ಸರಿಪಡಿಸುತ್ತೇನೆ. You have brought to my notice. I will look into it and get it verified.

SRI M. C. NANAIAH.—Mr. Speaker, Sir, there has been a cry all over the country that the quality of education has come down considerably. Today the entire education system and the examination system has become a farce. If at all the Government is interested in improving the quality of education, I think, certain amount of strict measures will have to be taken by the Government. Under the carry-over system, persons detained in P.U.C., who cannot pass in 3 or 4 subjects, may be allowed to go to the higher class. I would, therefore, request the Government to introduce the Pass-System of selections, promotions and public examinations. I therefore tell the Hon'ble Education Minister not to yield on this matter and the detained students should not be allowed to go to the higher classes. I want you to be strict and maintain the quality of education. Otherwise, they will be a burden on the society and on the Government.

ಶ್ರೀ ಕೆ.ರಾಮಭಟ್.—ಮಾನ್ಯ ಅಧ್ಯಕ್ಷರೆ ನಾನು ತಮ್ಮಲ್ಲಿ ಒಂದು ಪ್ರಶ್ನೆಯನ್ನು ಹೇಳುವುದೇನೆಂದರೆ ಯಾರು ಪರೀಕ್ಷೆಗಳಿಗೆ ಹೋಗುವುದಿಲ್ಲವೋ ಅಂಥವರನ್ನು ಪ್ರಮೋಟ್ ಮಾಡುತ್ತೇವೆಂದು ಹೇಳಿದರೆ ಇದು ನಿಜವಾಗಿಯೂ ಆತಂಕಕಾರಿಯಾಗಿರುತ್ತದೆ. ಯಾರು ಕಾಯಿಲೆಯಿಂದ ತೊಂದರೆಗೆ ಒಳಗಾಗಿರುತ್ತಾರೋ ಅಂಥವರಿಗೆ ಪ್ರಮೋಟ್ ಮಾಡಬೇಕೆಂದು ಹುಕುಂ ಮಾಡಿದ್ದೀರಿ. ಎರಡನೆಯದಾಗಿ ಇನ್ನತ್ತು ಶ್ರೀ ನಾನಯ್ಯನವರು ಏನು ಹೇಳಿರುತ್ತಾರೆ ಅದನ್ನು ಬದಲಾಯಿಸಬಾರದೆಂದು ಹೇಳುತ್ತೇನೆ. ನಾನು ಹೇಳುವುದೇನೆಂದರೆ ಸಮಗ್ರವಾಗಿ ವಿದ್ಯಾ ರೂಪವನ್ನೇ ಬದಲಾಯಿಸುವಂತೆ ಮಾಡಿದರೆ ನನ್ನದೇನು ಆಕ್ಷೇಪಣೆಯಿಲ್ಲ. ಈ ವರ್ಷ ಮಧ್ಯದಲ್ಲಿ ಏತಕ್ಕೆ ಬದಲಾಯಿಸುತ್ತಿದ್ದೀರಿ ಎನ್ನುವುದು ನನ್ನ ಪ್ರಶ್ನೆ. ಅದಕ್ಕೋಸ್ಕರವಾಗಿ ಮಾನವೀಯತೆಯ ದೃಷ್ಟಿಯಿಂದ ನೋಡಬೇಕೆಂದು ಹೇಳುತ್ತೇನೆ.

SRI G. B. SHANKAR RAO.—The Government Order No. ED 31 TPU 80, dated 18th June 1980 says that :

> "If the student is absent for the Annual Class Examination in one or more subjects on account of illness or accident, supported by a Medical Certificate countersigned by the District Surgeon or for other valid reasons supported by a relevant document with the permission of the Head of the Institutions, then the average of the total marks scored at the class test and Mid-Term Examination in the respective subjects shall be considered for promotion."

This is the position and there is nothing wrong in this notification. ಮಾನ್ಯ ನಾನಯ್ಯನವರು ಒಂದು ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ; ನಾವು ಈವತ್ತಿನದಿವಸ ನಮ್ಮ ಭಾವಿ ಪ್ರಜೆಗಳನ್ನು ಕೇವಲ ಅಕ್ಷರಸ್ಥರನ್ನಾಗಿ ಮಾಡುತ್ತೇವೆಂದು ರುಜು ಮಾಡುವುದಕ್ಕೆ ಬಂದರೆ ಸಾಕು ಎನ್ನುವಷ್ಟು ವಿದ್ಯೆಯನ್ನು ಕಲಿಸಿದರೆ ಸಾಕಾಗುವುದಿಲ್ಲ, ಈಗ ಏನಾಗುತ್ತಿದೆ ಎಂದರೆ ವಿದ್ಯೆಯ ಗುಣಮಟ್ಟ ಕೆಳಕ್ಕೆ ಇಳಿಯುತ್ತಿದೆ. ಇದಕ್ಕೆ ನಾವು ನೀವು ಕಾರಣರಾಗಿದ್ದೇವೆ. ಆದ್ದರಿಂದ ವಿದ್ಯೆಯ ಗುಣಮಟ್ಟವನ್ನು ಹೆಚ್ಚಿಸಬೇಕಾಗಿರುತ್ತದೆ. ಮಕ್ಕಳ ಉದ್ಧಾರ ಮಾಡಬೇಕೆಂಬ ಆಸಕ್ತಿ ನನಗಿದೆ. ಅದನ್ನು ನನಗೆ ಬಿಡಿ.

SRI M. C. NANAIAH.—I have got full confidence in the Education Minister. I am sure that he is going to do that job. Please do that.

ಶ್ರೀ ಎಂ. ಚಂದ್ರಶೇಖರ್.—ಶ್ರೀ ನಾನಯ್ಯನವರು ಹೇಳಿದ್ದು ತಾತ್ವಿಕವಾಗಿರುತ್ತದೆ. ಹಿಂದಿನ ಸರ್ಕಾರದವರು ಇದನ್ನು ಜಾರಿಗೆ ತಂದದ್ದು. ಇದಕ್ಕೆ ಶ್ರೀ ನಾನಯ್ಯನವರೂ ಕೂಡ ಜವಾಬ್ದಾರರಾಗಿದ್ದಾರೆ. ಹಿಂದೆ ಒಬ್ಬ ಸ್ಟೂಡೆಂಟ್ ಎರಡು ಸಬ್ಜಕ್ಟ್‌ಗಳಲ್ಲಿ ಪಾಸ್ ಆಗಿದ್ದರೂ ಕೂಡ ಆರ್ಡಿನೆನ್ಸ್ ಎಂದು ಮುಂದಕ್ಕೆ ಹೋಗಿ ಅಕ್ಟೋಬರ್ ಅಥವಾ ಮಾರ್ಚ್‌ನಲ್ಲಿ ಎಕ್ಸಾಮ್ ತೆಗೆದುಕೊಳ್ಳಬಹುದಾಗಿತ್ತು. ಈಗ ಒಂದೆರಡು ಸಬ್ಜಕ್ಟೇ ಅಥವಾ ಮೂರುನಾಲ್ಕು ಸಬ್‌ಜೆಕ್ಟ್‌ನ ತೀರ್ಮಾನ ಮಾಡಬೇಕು. ಇಲ್ಲ ಎಲ್ಲ ಸಬ್‌ಜೆಕ್ಟ್‌ಸ್‌ಗೂ ಪಬ್ಲಿಕ್ ಎಕ್ಸಾಮ್ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರ್‌ರಾವ್.—ಈಗ ಕ್ಲಾಸ್ ಎಕ್ಸಾಮ್ ಮಾಡುವುದೇ ಇರಲಿ ಪಬ್ಲಿಕ್ ಎಕ್ಸಾಮ್ ಮಾಡುವುದೇ ಇರಲಿ ಮಕ್ಕಳನ್ನು ನಾವು ಬುದ್ಧಿವಂತರನ್ನಾಗಿ ಮಾಡುವುದು ನಮ್ಮ ಕರ್ತವ್ಯ ಮತ್ತು ಪಾಲಕರ ಜವಾಬ್ದಾರಿಯೂ ಆಗಿರುತ್ತದೆ. ನಾವು ಯಾವುದಾದರೂ ಒಂದು ಧೋರಣೆ ತಳೆದಮೇಲೆ ಅದಕ್ಕೆ ಬದ್ಧರಾಗಿರಬೇಕು. ಮೂವತ್ತು ಪರ್ಸೆಂಟ್ ಉಳಿಸಂವುದು ಬೇಡ ಎಲ್ಲರನ್ನೂ ಮೇಲ್ಕೆ ತಳ್ಳಿ ಎಂದು ಹೇಳಿದರೆ ವಿದ್ಯೆಯ ಗುಣಮಟ್ಟವನ್ನು ಹೇಗೆ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.